ಅಲ್ಲಾಹುಮ್ಮ ಇನ್ನೀ ಅಊದು ಬಿಕ ಮಿನಲ್-ಅಜ್ಝಿ ವಲ್-ಕಸಲಿ ವಲ್- ಜುಬ್ನಿ ವಲ್-ಬುಖ್ಲಿ ವಲ್-ಹರಮಿ ವ ಅಝಾಬಿಲ್-ಖಬ್ರ್. (ಅರ್ಥ: ಓ ಅಲ್ಲಾಹನೇ, ಖಂಡಿತವಾಗಿಯೂ ನಾನು ನಿನ್ನಲ್ಲಿ ಅಶಕ್ತತೆ, ಸೋಮಾರಿತನ, ಹೇಡಿತನ, ಜಿಪುಣತನ, ಅತಿ ವೃದ್ಧಾಪ್ಯ ಮತ್ತು ಸಮಾಧಿಯ ಶಿಕ್ಷೆಯಿಂದ ಅಭಯ ಕೋರುತ್ತೇನೆ). ಅಲ್ಲಾಹುಮ್ಮ ಆತಿ ನಫ್ಸೀ ತಖ್ವಾಹಾ, ವ ಝಕ್ಕಿಹಾ ಅಂತ ಖೈರು ಮನ್ ಝಕ್ಕಾಹಾ, ಅಂತ ವಲಿಯ್ಯುಹಾ ವ ಮೌಲಾಹಾ. (ಅರ್ಥ: ಓ ಅಲ್ಲಾಹನೇ, ನನ್ನ ಆತ್ಮಕ್ಕೆ ಅದರ ತಖ್ವಾವನ್ನು (ದೇವಭಕ್ತಿಯನ್ನು) ನೀಡು, ಮತ್ತು ಅದನ್ನು ಪರಿಶುದ್ಧಗೊಳಿಸು, ನೀನೇ ಅದನ್ನು ಪರಿಶುದ್ಧಗೊಳಿಸುವವರಲ್ಲಿ ಅತ್ಯುತ್ತಮನು. ನೀನೇ ಅದರ 'ವಲೀ' (ರಕ್ಷಕ ಮಿತ್ರ) ಮತ್ತು 'ಮೌಲಾ' (ಒಡೆಯ)). "ಅಲ್ಲಾಹುಮ್ಮ ಇನ್ನೀ ಅಊದು ಬಿಕ ಮಿನ್ ಇಲ್ಮಿನ್ ಲಾ ಯನ್ಫಅ್, ವ ಮಿನ್ ಖಲ್ಬಿನ್ ಲಾ ಯಖ್ಶಅ್, ವ ಮಿನ್ ನಫ್ಸಿನ್ ಲಾ ತಶ್ಬಅ್, ವ ಮಿನ್ ದಅ್ವತಿನ್ ಲಾ ಯುಸ್ತಜಾಬು ಲಹಾ". (ಅರ್ಥ: ಓ ಅಲ್ಲಾಹನೇ, ಖಂಡಿತವಾಗಿಯೂ ನಾನು ಪ್ರಯೋಜನ ನೀಡದ ಜ್ಞಾನದಿಂದ, ವಿನಯವಿಲ್ಲದ ಹೃದಯದಿಂದ, ಆಸೆ ತೀರದ ಆತ್ಮದಿಂದ, ಮತ್ತು ಸ್ವೀಕರಿಸಲ್ಪಡದ ಪ್ರಾರ್ಥನೆಯಿಂದ ನಿನ್ನಲ್ಲಿ ಅಭಯ ಕೋರುತ್ತೇನೆ)

ಝೈದ್ ಇಬ್ನ್ ಅರ್ಖಮ್ (ಅಲ್ಲಾಹು ಅವರ ಬಗ್ಗೆ ಸಂಪ್ರೀತನಾಗಲಿ) ರಿಂದ ವರದಿ: ಅವರು ಹೇಳಿದರು: ಅಲ್ಲಾಹನ ಸಂದೇಶವಾಹಕರು (ಅವರ ಮೇಲೆ ಅಲ್ಲಾಹನ ಕೃಪೆ ಮತ್ತು ಶಾಂತಿಯಿರಲಿ) ಏನು ಹೇಳುತ್ತಿದ್ದರೋ ಅದನ್ನು ಹೊರತುಪಡಿಸಿ ನಾನು ನಿಮಗೆ ಬೇರೇನೂ ಹೇಳುವುದಿಲ್ಲ. ಅವರು ಹೇಳುತ್ತಿದ್ದರು: "ಅಲ್ಲಾಹುಮ್ಮ ಇನ್ನೀ ಅಊದು ಬಿಕ ಮಿನಲ್-ಅಜ್ಝಿ ವಲ್-ಕಸಲಿ ವಲ್-ಜುಬ್ನಿ ವಲ್- ಬುಖ್ಲಿ ವಲ್-ಹರಮಿ ವ ಅಝಾಬಿಲ್-ಖಬ್ರ್. (ಅರ್ಥ: ಓ ಅಲ್ಲಾಹನೇ, ಖಂಡಿತವಾಗಿಯೂ ನಾನು ನಿನ್ನಲ್ಲಿ ಅಶಕ್ತತೆ, ಸೋಮಾರಿತನ, ಹೇಡಿತನ, ಜಿಪುಣತನ, ಅತಿ ವೃದ್ಧಾಪ್ಯ ಮತ್ತು ಸಮಾಧಿಯ ಶಿಕ್ಷೆಯಿಂದ ಅಭಯ ಕೋರುತ್ತೇನೆ). ಅಲ್ಲಾಹುಮ್ಮ ಆತಿ ನಫ್ಸೀ ತಖ್ವಾಹಾ, ವ ಝಕ್ಕಿಹಾ ಅಂತ ಖೈರು ಮನ್ ಝಕ್ಕಾಹಾ, ಅಂತ ವಲಿಯ್ಯುಹಾ ವ ಮೌಲಾಹಾ. (ಅರ್ಥ: ಓ ಅಲ್ಲಾಹನೇ, ನನ್ನ ಆತ್ಮಕ್ಕೆ ಅದರ ತಖ್ವಾವನ್ನು (ದೇವಭಕ್ತಿಯನ್ನು) ನೀಡು, ಮತ್ತು ಅದನ್ನು ಪರಿಶುದ್ಧಗೊಳಿಸು, ನೀನೇ ಅದನ್ನು ಪರಿಶುದ್ಧಗೊಳಿಸುವವರಲ್ಲಿ ಅತ್ಯುತ್ತಮನು. ನೀನೇ ಅದರ 'ವಲೀ' (ರಕ್ಷಕ ಮಿತ್ರ) ಮತ್ತು 'ಮೌಲಾ' (ಒಡೆಯ)). "ಅಲ್ಲಾಹುಮ್ಮ ಇನ್ನೀ ಅಊದು ಬಿಕ ಮಿನ್ ಇಲ್ಮಿನ್ ಲಾ ಯನ್ಫಅ್, ವ ಮಿನ್ ಖಲ್ಬಿನ್ ಲಾ ಯಖ್ಶಅ್, ವ ಮಿನ್ ನಫ್ಸಿನ್ ಲಾ ತಶ್ಬಅ್, ವ ಮಿನ್ ದಅ್ವತಿನ್ ಲಾ ಯುಸ್ತಜಾಬು ಲಹಾ". (ಅರ್ಥ: ಓ ಅಲ್ಲಾಹನೇ, ಖಂಡಿತವಾಗಿಯೂ ನಾನು ಪ್ರಯೋಜನ ನೀಡದ ಜ್ಞಾನದಿಂದ, ವಿನಯವಿಲ್ಲದ ಹೃದಯದಿಂದ, ಆಸೆ ತೀರದ ಆತ್ಮದಿಂದ, ಮತ್ತು ಸ್ವೀಕರಿಸಲ್ಪಡದ ಪ್ರಾರ್ಥನೆಯಿಂದ ನಿನ್ನಲ್ಲಿ ಅಭಯ

ಕೋರುತ್ತೇನೆ).
[صحيح] [رواه مسلم]

ಪ್ರವಾದಿಯವರ (ಅವರ ಮೇಲೆ ಅಲ್ಲಾಹನ ಕೃಪೆ ಮತ್ತು ಶಾಂತಿಯಿರಲಿ) ಪ್ರಾರ್ಥನೆಗಳಲ್ಲಿ ಇದು ಒಂದಾಗಿತ್ತು: "ಅಲ್ಲಾಹುಮ್ಮ ಇನ್ನೀ ಅಊದು ಬಿಕ" ಓ ಅಲ್ಲಾಹನೇ, ನಾನು ನಿನ್ನಲ್ಲಿ ಅಭಯ ಮತ್ತು ಆಶ್ರಯ ಕೋರುತ್ತೇನೆ, "ಮಿನಲ್-ಅಜ್ಝಿ" ಪ್ರಯೋಜನಕಾರಿಯಾದ ಉಪಾಯ ಮಾಡಲು ಸಾಮರ್ಥ್ಯವಿಲ್ಲದಿರುವುದರಿಂದ, "ವಲ್-ಕಸಲಿ" ಕಾರ್ಯ ಮಾಡುವ ಇಚ್ಛೆಯಿಲ್ಲದಿರುವುದರಿಂದ – ಅಸಮರ್ಥನು ಉಪಾಯ ಮಾಡಲು ಸಾಧ್ಯವಿಲ್ಲ, ಮತ್ತು ಸೋಮಾರಿಯು ಅದನ್ನು ಮಾಡಲು ಬಯಸುವುದಿಲ್ಲ, "ವಲ್-ಜುಬ್ನಿ" ಮಾಡಬೇಕಾದ ಕಾರ್ಯವನ್ನು ಮಾಡಲು ಮುಂದಾಗಲು ಹಿಂಜರಿಯುವುದರಿಂದ, "ವಲ್-ಬುಖ್ಲಿ" ನೀಡಬೇಕಾದುದನ್ನು ತಡೆಯುವುದರಿಂದ, "ವಲ್-ಹರಮಿ" ದೇಹದ ದೌರ್ಬಲ್ಯಕ್ಕೆ ಕಾರಣವಾಗುವ ಅತಿ ವೃದ್ಧಾಪ್ಯದಿಂದ, "ವ ಅಝಾಬಿಲ್-ಖಬ್ರಿ" ಸಮಾಧಿಯ ಶಿಕ್ಷೆ ಮತ್ತು ಅದಕ್ಕೆ ತಲುಪಿಸುವ ಕಾರಣಗಳಿಂದ. "ಅಲ್ಲಾಹುಮ್ಮ ಆತಿ ನಫ್ಸೀ" ಓ ಅಲ್ಲಾಹನೇ, ನನ್ನ ಆತ್ಮಕ್ಕೆ ನೀಡು ಮತ್ತು ಅನುಗ್ರಹಿಸು "ತಖ್ವಾಹಾ" ವಿಧೇಯತೆಯನ್ನು ಮಾಡುವ ಮೂಲಕ ಮತ್ತು ಪಾಪವನ್ನು ಬಿಡುವ ಮೂಲಕ ಅದರ ತಖ್ವಾವನ್ನು, "ವ ಝಕ್ಕಿಹಾ" ಮತ್ತು ಅದನ್ನು ನೀಚತನ ಮತ್ತು ಕೀಳು ನೈತಿಕತೆಯಿಂದ ಪರಿಶುದ್ಧಗೊಳಿಸು, "ಅನ್ತ ಖೈರು ಮನ್ ಝಕ್ಕಾಹಾ" ನೀನೇ ಅದನ್ನು ಪರಿಶುದ್ಧಗೊಳಿಸುವವರಲ್ಲಿ ಅತ್ಯುತ್ತಮನು, ಮತ್ತು ನಿನ್ನನ್ನು ಹೊರತುಪಡಿಸಿ ಅದಕ್ಕೆ ಬೇರೆ ಪರಿಶುದ್ಧಗೊಳಿಸುವವನಿಲ್ಲ, "ಅಂತ ವಲಿಯ್ಯುಹಾ" ನೀನೇ ಅದರ ರಕ್ಷಕ ಮಿತ್ರ ಮತ್ತು ಅದರ ಉಸ್ತುವಾರಿ ವಹಿಸುವವನು, "ವ ಮೌಲಾಹಾ" ಅದರ ವ್ಯವಹಾರಗಳನ್ನು ನಿರ್ವಹಿಸುವವನು, ಅದರ ಪ್ರಭು, ಮಾಲೀಕ ಮತ್ತು ಅದಕ್ಕೆ ಅನುಗ್ರಹ ನೀಡುವವನು. "ಅಲ್ಲಾಹುಮ್ಮ ಇನ್ನೀ ಅಊದು ಬಿಕ ಮಿನ್ ಇಲ್ಮಿನ್ ಲಾ ಯನ್ಫಅ್" ಓ ಅಲ್ಲಾಹನೇ, ನಾನು ಪ್ರಯೋಜನ ನೀಡದ ಜ್ಞಾನದಿಂದ ನಿನ್ನಲ್ಲಿ ಅಭಯ ಕೋರುತ್ತೇನೆ. ಅಂದರೆ, ಜ್ಯೋತಿಷ್ಯ, ಭವಿಷ್ಯ ನುಡಿಯುವುದು, ಮಾಟ, ಅಥವಾ ಪರಲೋಕದಲ್ಲಿ ಪ್ರಯೋಜನ ನೀಡದ ಜ್ಞಾನ, ಅಥವಾ ಅದರಂತೆ ಕಾರ್ಯನಿರ್ವಹಿಸದ ಜ್ಞಾನದಿಂದ. "ವ ಮಿನ್ ಖಲ್ಬಿನ್ ಲಾ ಯಖ್ಶಅ್" ನಿನಗೆ ವಿನಯ ತೋರದ, ಅಧೀನವಾಗದ, ಶಾಂತವಾಗದ, ಮತ್ತು ನಿನ್ನ ಸ್ಮರಣೆಯಿಂದ ತೃಪ್ತಿ ಹೊಂದದ ಹೃದಯದಿಂದ. ವ ಮಿನ್ ನಫ್ಸಿನ್ ಲಾ ತಶ್ಬಅ್" ಅಲ್ಲಾಹು ತನಗೆ ನೀಡಿದ ಮತ್ತು ಒದಗಿಸಿದ ಹಲಾಲ್ ಮತ್ತು ಉತ್ತಮವಾದದ್ದರಲ್ಲಿ ತೃಪ್ತಿ ಹೊಂದದ ಆತ್ಮದಿಂದ. "ವ ಮಿನ್ ದಅ್ವತಿನ್" ತಿರಸ್ಕರಿಸಲ್ಪಟ್ಟ "ಲಾ ಯುಸ್ತಜಾಬು ಲಹಾ" ಸ್ವೀಕರಿಸಲ್ಪಡದ ಪ್ರಾರ್ಥನೆಯಿಂದ (ಅಭಯ ಕೋರುತ್ತೇನೆ).

http://www.sunnah.global/hadeeth/kn/show/5878